# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 369 |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಸಿ.ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 10.03.2025 |
| **ಉತ್ತರಿಸಬೇಕಾದ ಸಚಿವರು** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಭಾಗದ ಜನರ ಆರೋಗ್ಯಾಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳೇನು; | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಗ್ರಾಮೀಣ ಭಾಗದ ಜನರ ಆರೋಗ್ಯಾಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>**1. ಅಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದಡಿಯಲ್ಲಿ ಗೃಹ ಆರೋಗ್ಯ ಯೋಜನೆಯಲ್ಲಿ ಪ್ರತೀ ಮನೆ ಭೇಟಿ ಮಾಡಿ ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತಿದೆ.**<br><br>ರಕ್ತದೊತ್ತಡ, ಮಧುಮೇಹ ಹಾಗೂ ಮೂರು (3) ಕ್ಯಾನ್ಸರ್ ರೋಗಗಳಾದ ಬಾಯಿ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹಾಗೂ ಗರ್ಭಕಂಠದ ಕ್ಯಾನ್ಸರ್ ಗಳನ್ನು ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ.<br><br>ಉಪಶಾಮಕ ಆರೈಕೆ ಕಾರ್ಯಕ್ರಮದಡಿಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಹಾಸಿಗೆ ಹುಣ್ಣು, ಗಾಯದ ಡ್ರೆಸ್ಸಿಂಗ್, ಕ್ಯಾತಿಟೆರೈಸೇಶನ್, ನೋವು ನಿರ್ವಹಣೆ ಔಷಧಿಗಳು, ಭೌತಿಕ ಚಿಕಿತ್ಸೆಯನ್ನು ಮನೆಯಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.<br><br>ಹಿರಿಯ ನಾಗರೀಕರ ಕಾರ್ಯಕ್ರದಡಿಯಲ್ಲಿ ರಕ್ತದೊತ್ತಡ, ಮಧುಮೇಹ, ಭೌತಚಿಕಿತ್ಸೆ ಮತ್ತು ವಯೋವೃದ್ಧಿಗೆ ಸಂಬಂಧಿಸಿದ ಖಾಯಿಲೆಗಳಿಗೆ ಮನೆಯಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ ಹಾಗೂ ಹಿರಿಯ ನಾಗರೀಕರಿಗೆ ಆರೋಗ್ಯ ತಪಾಸಣೆ, ವೈಯಕ್ತಿಕ ಶುಚಿತ್ವದ ಬಗ್ಗೆ ಅರಿವು, ಮರು ತಪಾಸಣೆ, ಆಪ್ತ ಸಮಾಲೋಚನೆಯನ್ನು ಮಾಡಲಾಗುತ್ತಿದೆ.<br><br>**2. ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಆಶಾ ಕಿರಣ ಯೋಜನೆಯನ್ನು ಅನುಷ್ಠಾನಗೊಳಿಸಿ, ವಿವಿಧ ಕಾರಣಗಳಿಂದ ಉಂಟಾಗ ಬಹುದಾದ ಅಂಧತ್ವ ಪ್ರಮಾಣ ದರವನ್ನು ಇಳಿಸುವ ಉದ್ದೇಶದಿಂದ "ಆಶಾಕಿರಣ" ಯೋಜನೆಯನ್ನು ಜಿಲ್ಲಾ ವ್ಯಾಪ್ತಿಯಲ್ಲಿ** |

| | | |
|---|---|---|
| | | **ಬರುವ ಗ್ರಾಮೀಣ ಭಾಗದ ಜನರನ್ನು ಒಳಗೊಂಡಂತೆ ಎಲ್ಲಾ ಜನರಿಗೆ ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತಿದೆ.**<br><br>• ದೃಷ್ಟಿ ಕೇಂದ್ರಗಳಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ಕನ್ನಡಕಗಳ ವಿತರಣೆ.<br>• ಉಚಿತ ಶಸ್ತ್ರಚಿಕಿತ್ಸೆ ಮತ್ತು ಇತರೆ ಕಣ್ಣಿನ ಚಿಕಿತ್ಸೆಗಳಿಗೆ ವ್ಯವಸ್ಥೆ.<br>• ಉತ್ತಮ ದೃಷ್ಟಿಯ ಪ್ರಾಮುಖ್ಯತೆ ಮತ್ತು ಕಣ್ಣುಗಳನ್ನು ಹೇಗೆ ಉತ್ತಮವಾಗಿ ನೋಡಿಕೊಳ್ಳುವುದು ಎಂಬುದರ ಕುರಿತು ಅರಿವು ಮೂಡಿಸುವುದು.<br><br>**3. ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ದಂತಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಿ, ಸಂಪೂರ್ಣ ಮತ್ತು ಭಾಗಶಃ ಹಲ್ಲುಗಳನ್ನು ಕಳೆದುಕೊಂಡವರಿಗೆ ದಂತ ಪಂಕ್ತಿಗಳನ್ನು ಒದಗಿಸಲಾಗುತ್ತಿದೆ.**<br><br>ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳಡಿಯಲ್ಲಿ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುವಂತೆ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.<br><br>ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.<br><br>**4. ಸಮಗ್ರ ರೋಗಗಳ ಕಣ್ಗಾವಲು ಕಾರ್ಯಕ್ರಮದಡಿಯಲ್ಲಿ, ಸಾಂಕ್ರಾಮಿಕ ರೋಗಗಳಿಗೆ ವಿಕೇಂದ್ರೀಕೃತ ಕಣ್ಗಾವಲು ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ರಾಜ್ಯದಲ್ಲಿ ರೋಗದ ಕಣ್ಗಾವಲು ಬಲಪಡಿಸಲು, ಎಚ್ಚರಿಕೆಯ ಸಂಕೇತಗಳನ್ನು (ಅರ್ಲಿ ವಾರ್ನಿಂಗ್ ಸಿಗ್ನಲ್) ಪತ್ತೆಹಚ್ಚಲು ಹಾಗೂ ಜಿಲ್ಲೆಗಳಲ್ಲಿ ಔಟ್ ಬ್ರೇಕ್ ನಂತಹ ಆರೋಗ್ಯ ಸವಾಲುಗಳಿಗೆ ಪ್ರತಿಕ್ರಿಯೆಯಾಗಿ ಸಮಯೋಚಿತ ಮತ್ತು ಪರಿಣಾಮಕಾರಿ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ನಿರ್ವಹಿಸಲಾಗುತ್ತಿದೆ. ಮುಂದುವರೆದು, ಕೆಳಕಂಡ ರೋಗಗಳ ನಿಯಂತ್ರಣಕ್ಕೆ ಕ್ರಮವಹಿಸಲಾಗುತ್ತಿದೆ.**<br><br>• ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ.<br>• ಹಾವು ಕಡಿತದ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ.<br>• ಲೆಪ್ಟೊಸ್ಪಿರೋಸಿಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಕಾರ್ಯಕ್ರಮ. |
| ಆ) | ಸ್ಥಳೀಯ ಮಟ್ಟದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ; | ರಾಜ್ಯದ ಸ್ಥಳೀಯ ಮಟ್ಟದಲ್ಲಿ ಒಟ್ಟು 71 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ವಿವರ ಈ ಕೆಳಕಂಡಂತಿದೆ. |

| | | | | |
|---|---|---|---|---|
| | | ಕ್ರ. ಸಂ | **ಸರ್ಕಾರದ ಆದೇಶ ಸಂಖ್ಯೆ** | **ಮೇಲ್ದರ್ಜೆಗೇರಿಸಲಾದ ಪ್ರಾ.ಆ.ಕೇಂದ್ರಗಳ ಸಂಖ್ಯೆ** |
| | | 1 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/95/ಸಿಜಿಎಂ/2019, ದಿನಾಂಕ:-03-06-2019 | **1** |
| | | 2 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/137/ಸಿಜಿಎಂ/2022, ದಿನಾಂಕ:-27-07-2022 | **5** |
| | | 3 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/137/ಸಿಜಿಎಂ/2022, ದಿನಾಂಕ:-23-11-2022 | **38** |
| | | 4 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/317/ಸಿಜಿಎಂ/2021, ದಿನಾಂಕ:-13-03-2023 | **1** |
| | | 5 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/43/ ಸಿಜಿಎಂ/2024, ದಿನಾಂಕ:-16-03-2024 | **1** |
| | | 6 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/201/ ಸಿಜಿಎಂ/2022, ದಿನಾಂಕ:-09-07-2024 | **15** |
| | | 7 | ಸರ್ಕಾರದ ಆದೇಶ ಸಂಖ್ಯೆ:-ಆಕುಕ/391/ ಸಿಜಿಇ/2022, ದಿನಾಂಕ:-27-09-2024 | **10** |
| | | | **ಒಟ್ಟು** | **71** |
| ಇ) | ಸರ್ಕಾರ 5 ವರ್ಷದ ಅವಧಿಯಲ್ಲಿ ಒಟ್ಟಾರೆ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಹೊಂದಿದೆ? (ವರ್ಷವಾರು ಮಾಹಿತಿ ಒದಗಿಸುವುದು) | IPHS ಮಾನದಂಡದ ಪ್ರಕಾರ ಹಾಗೂ ನಿರ್ದೇಶಕರು DES ರವರು Declining Growth Method ಅನುಗುಣವಾಗಿ 2027 ರ ಗ್ರಾಮೀಣ ಜನಸಂಖ್ಯೆಯನ್ನು ಪರಿಗಣಿಸಿ ಅವಶ್ಯಕತೆಗನುಗುಣವಾಗಿ ಪ್ರಸ್ತಾವನೆಗಳು ಬಂದಾಗ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. | | |

**ಆಕುಕ /13 /ಎಸ್‌ಬಿವಿ /2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

## ಅನುಬಂಧ -

| ಕ್ರ ಸಂ | ಕಾರ್ಯಕ್ರಮಗಳು |
|---|---|
| 1 | ತಾಯಿ ಆರೋಗ್ಯ ಕಾರ್ಯಕ್ರಮ |
| 2 | ಕುಟುಂಬ ಕಲ್ಯಾಣ ಕಾರ್ಯಕ್ರಮ |
| 3 | ಮಕ್ಕಳ ಆರೋಗ್ಯ |
| 4 | ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ತಂತ್ರ ವಿಧಾನ |
| 5 | ಲಸಿಕಾ ಕಾರ್ಯಕ್ರಮ |
| 6 | ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ |
| 7 | ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ |
| 8 | ರಾಷ್ಟ್ರೀಯ ಪೌಷ್ಠಿಕ ಆಹಾರ ಕಾರ್ಯಕ್ರಮ |
| 9 | ರಾಷ್ಟ್ರೀಯ ಆಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ಕಾರ್ಯಕ್ರಮ |
| 10 | ಸಂಚಾರಿ ಆರೋಗ್ಯ ಘಟಕಗಳು |
| 11 | ಆಶಾ ಕಾರ್ಯಕ್ರಮ |
| 12 | ಸಮಗ್ರ ಆರೋಗ್ಯ ಕಾರ್ಯಕ್ರಮ / ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು |
| 13 | ಆರೋಗ್ಯ ನಿರ್ವಹಣೆಯ ಮಾಹಿತಿ ವ್ಯವಸ್ಥೆ/ಹೆಚ್.ಎಂ.ಐ.ಎಸ್& ಆರ್.ಸಿ.ಹೆಚ್ ತಂತ್ರಾಂಶ |
| 14 | ಆರೋಗ್ಯಕ್ಕಾಗಿ ಸಮುದಾಯದ ಸಹಭಾಗಿತ್ವ |
| 15 | ಮುಕ್ತನಿಧಿ |
| 16 | ಇ.ಎಂ.ಆರ್.ಐ-108 ಕಾರ್ಯಕ್ರಮ (ರಾಷ್ಟ್ರೀಯ ಆಂಬುಲೆನ್ಸ್ ಸೇವೆಗಳು) |
| 17 | ಇ-ಆಸ್ಪತ್ರೆ/ ಟೆಲಿ ಮೆಡಿಸಿನ್ ಕಾರ್ಯಕ್ರಮ |
| 18 | ಆರೋಗ್ಯ ಸಹಾಯವಾಣಿ – 104 ಕಾರ್ಯಕ್ರಮ |
| 19 | ಗುಣಮಟ್ಟ ಖಾತ್ರಿ ಕಾರ್ಯಕ್ರಮ, ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ |
| 20 | ರಾಷ್ಟ್ರೀಯ ಉಚಿತ ರೋಗಪತ್ತೆ ಸೇವೆಗಳು / ರಾಷ್ಟ್ರೀಯ ಉಚಿತ ಔಷಧಿಗಳು |
| 21 | ವಿಕಿರಣ ಸುರಕ್ಷತಾ ಕಾರ್ಯಕ್ರಮ |
| 22 | ಐ.ಇ.ಸಿ-ಬಿ.ಸಿ.ಸಿ ಕಾರ್ಯಕ್ರಮ |
| 23 | ರಾಜ್ಯ ರಕ್ತ ಕಣ ವಿಭಾಗ / ರಕ್ತ ಸಂಗ್ರಹಣಾ ಘಟಕ |
| 24 | ರಕ್ತ ಸುರಕ್ಷತೆ ಮತ್ತು ರಕ್ತ ಸಂಗ್ರಹಣಾ ವಿಭಾಗ |
| 25 | ವೈದ್ಯಕೀಯ ಸಲಕರಣಾ ನಿರ್ವಹಣಾ ವಿಭಾಗ |
| 26 | ಆಯುಷ್ ಕಾರ್ಯಕ್ರಮ |
| 27 | ಸಮಗ್ರ ರೋಗಗಳ ಕಣ್ಗಾವಲು ಯೋಜನೆ |
| 28 | ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ |
| 29 | ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ |
| 30 | ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ |
| 31 | ರಾಷ್ಟ್ರೀಯ ವೈರಲ್ ಹೆಪಟೈಟಿಸ್ ನಿಯಂತ್ರಣ ಕಾರ್ಯಕ್ರಮ |
| 32 | ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ |
| 33 | ಲೆಪ್ಟೋಸ್ಪೈರೋಸಿಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ |
| 34 | ಕ್ಯಾಸನೂರು ಮಂಗನ ಖಾಯಿಲೆ |
| 35 | ರಾಷ್ಟ್ರೀಯ ಕ್ಯಾನ್ಸರ್, ಮಧುಮೇಹ, ಹೃದಯ ರಕ್ತನಾಳಗಳ ರೋಗ ಮತ್ತು ಪಾರ್ಶ್ವವಾಯು ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ |
| 36 | ರಾಷ್ಟ್ರೀಯ ವಯೋವೃದ್ಧರ ಆರೋಗ್ಯ ಆರೈಕೆ ಕಾರ್ಯಕ್ರಮ |
| 37 | ರಾಷ್ಟ್ರೀಯ ಉಪ ಶಾಮಕ ಆರೈಕೆ ಕಾರ್ಯಕ್ರಮ |
| 38 | ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ |
| 39 | ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಮತ್ತು ಐ.ಸಿ.ಯು ಕಾರ್ಯಕ್ರಮ |
| 40 | ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ |
| 41 | ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣಾ ಕಾರ್ಯಕ್ರಮ |
| 42 | ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ |
| 43 | ರಾಷ್ಟ್ರೀಯ ಫ್ಲೋರೋಸಿಸ್ ನಿಯಂತ್ರಣ ಕಾರ್ಯಕ್ರಮ |
| 44 | ರಾಷ್ಟ್ರೀಯ ಬಾಯಿಯ ಆರೋಗ್ಯ ಕಾರ್ಯಕ್ರಮ |
| 45 | ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯದ ಕಾರ್ಯಕ್ರಮ |

ile No. HFW/13/SB
ienerated from eOffic



File No. HFW/13/SBV/2025-HEALTH 2-HEALTH AND FAMILY WELFARE SEC (Computer No. 1699840)
Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 28/03/2025 11:14 AM